ಬಟ್ಟೆಗಳನ್ನು ತರುತ್ತಿದ್ದ, ಹಣವನ್ನು ಕೂಡ ಕೊಟ್ಟು ಹೋಗುತ್ತಿದ್ದ. ಗೆಳೆತನ ಶುರುವಾದಾಗ ಇದ್ದ ಗಾಢತೆ ಕ್ರಮೇಣ ಕ್ಷೀಣಿಸತೊಡಗಿತು.'

'ಅವನ ಈ ವರ್ತನೆಯನ್ನು ನೀವು ಸಹಿಸುತ್ತಿದ್ದಿರೆ?'

'ಏನು ಮಾಡುವುದು ಕಮಿಟ್ ಆಗಿಬಿಟ್ಟಿದ್ದೆ.'

'ಈಗ ನೀವೊಂದು ಮದುವೆಯನ್ನು ಮಾಡಿಕೊಳ್ಳಬಹುದಲ್ಲ' ಇಂತಹದೊಂದು ಪ್ರಶ್ನೆಯನ್ನು ಅವಳು ನನ್ನಿಂದ ನಿರೀಕ್ಷಿಸಿರಲಿಲ್ಲವೇನೋ. ತಲೆ ಎತ್ತಿ ತಟ್ಟನೆ ಹೇಳಿದ್ದಳು: 'ಅದರಿಂದ ನನಗೆ ಲಾಭವೇನೂ ಇಲ್ಲ. ಆ ಮಗುವನ್ನು ಚೆನ್ನಾಗಿ ಸಾಕಿ ಕೊಂಡರೆ ಸಾಕು. ಇನ್ಯಾವ ಸುಖಕ್ಕೆ ನನಗೆ ಮದುವೆ.'

'ನಿಮಗೆ ತಂದೆ–ತಾಯಿಗಳಿಲ್ಲವೆ?'

'ಇಲ್ಲ' ನಿಧಾನವಾಗಿ ಉದ್ಗಾರ ಬಂತು.

ದಿವಾಕರನಂತೆ ಈ ಕುಮುದಳೂ ವಿಚಿತ್ರವಾದ ವ್ಯಕ್ತಿಯೆನಿಸಿತು. ಬ್ಯಾಗಿನಲ್ಲಿದ್ದ ಮನೆಯ ಅಧಿಕಾರ ಪತ್ರವನ್ನು ತೆಗೆದು ಅವಳ ಕೈಗೆ ಕೊಡುತ್ತಾ ಹೇಳಿದೆ: ಇದು ದಿವಾಕರನ ಮನೆಯ ಅಧಿಕಾರದ ಪತ್ರ ನಿಮ್ಮ ಹೆಸರಿಗೆ ಬದಲಾಯಿಸಿದ್ದಾನೆ. ಕಾರವಾರದಲ್ಲಿ ನಾವಿರುವ ಮನೆಯ ಪಕ್ಕದಲ್ಲೇ ಅವನ ಮನೆ. ಆ ಮನೆಯ ಒಡೆತನ ಇನ್ನು ನಿಮ್ಮದು' ಅವಳು ಪತ್ರವನ್ನು ನೋಡಿದಳು. ಕ್ಷಣಹೊತ್ತು ಮೂಕಳಾಗಿದ್ದವಳ ಕಣ್ಣಲ್ಲಿ ನೀರು.

'ಇದ್ದಕ್ಕಿದ್ದ ಹಾಗೆ ಭಾವುಕರಾದಿರಿ' ಅವಳ ವರ್ತನೆಯನ್ನು ಅಪಹಾಸ್ಯ ಮಾಡುವ ರೀತಿಯಲ್ಲಿ ಕೇಳಿದ್ದೆ.

'ಹಾಗೇನು ಇಲ್ಲ, ಅವನ ಹೃದಯ ಶ್ರೀಮಂತಿಕೆ ನನಗೆ ನಿಮಗಿಂತಲೂ ಚೆನ್ನಾಗಿ ಗೊತ್ತು. ಆದರೂ ಅರ್ಥವಾಗದ ಗೊಂದಲಗಳಿಗೆ ಸಿಲುಕಿದವನಂತೆ ತೋರುತ್ತಿದ್ದ ಅಥವಾ ನಾನೇ ಸಿಲುಕಿಸಿದ್ದೆ.'

'ಹಾಗಾದರೆ ಅವನ ಆತ್ಮಹತ್ಯೆಗೆ ನೀವು ಕಾರಣರಾದಂತಲ್ಲವೆ' ತಟ್ಟನೆ ಪ್ರಶ್ನಿಸಿದಾಗ ಬೆಚ್ಚಿಬಿದ್ದಳು. ತಲೆಯೆತ್ತಿ ಹೇಳಿದಳು 'ಹಾಗೇನಾದರೂ ಆಗಿದ್ದರೆ... ನಾನು ಹುಟ್ಟಿದ್ದೆ ತಪ್ಪು ಎಂದು ಭಾವಿಸಿಕೊಳ್ಳಲೆ. ಅದಕ್ಕಾಗಿ ಪಶ್ಚಾತ್ತಾಪವನ್ನು ಖಂಡಿತವಾಗಿಯೂ ಅನುಭವಿಸುತ್ತೇನೆ...' ಅವಳು ಉದ್ರೇಕಗೊಳ್ಳುತ್ತಿದ್ದಳು. ಮುಂದೆ ಮಾತಾಡುವುದು ಸರಿಯಿಲ್ಲವೆನಿಸಿತು. ಕಡೆಯದಾಗಿ ಹೇಳಿದೆ: 'ಏನೋ ವಿಧಿ ಹಾಗಾಯಿತು. ನಿಮ್ಮನ್ನು ನೋಯಿಸಿದ್ದಕ್ಕೆ ಕ್ಷಮೆ ಕೋರುತ್ತೇನೆ. ನೀವು ಬಂದು ಮನೆಯನ್ನು ಮಾರಿಕೊಳ್ಳಬಹುದು ಅಥವಾ ನಿಮಗೆ ತೋರಿದಂತೆ ಮಾಡಬಹುದು.'

'ಇಲ್ಲಿ ಕೆಲಸಬಿಟ್ಟು ಕಾರವಾರಕ್ಕೆ ಬರಲಾರೆ. ಅವನು ನನಗೆ ಕಾಣಿಕೆಯಾಗಿ ಕೊಟ್ಟದ್ದನ್ನು ಮಾರಲಾರೆ. ಯಾರಿಗಾದರೂ ಬಾಡಿಗೆಗೆ ಕೊಟ್ಟರೆ ಆದೀತು' ಅವಳ ನಿರ್ಧಾರ ಸರಿಯಾಗಿಯೇ ಇತ್ತು.

ಸಂಜೆಗೆ ಒಂದಷ್ಟು ತಿಂಡಿ ಮಾಡಿದಳು. ತಿಂಡಿ ತಿಂದು ಅವಳಿಗೆ ಅಡ್ರಸ್ಸು ಕೊಟ್ಟು ನಾಡಕರ್ಣಿ ಕೊಟ್ಟಿದ್ದ ದಿವಾಕರನ ಊರಿನ ಬಸ್ಸು ಹಿಡಿಯಲು ತೀರ್ಮಾನಿಸಿದೆ. ಹಣ ಬೇಕೆ ಎಂದು ಕೇಳಿದಾಗ ಕುಮುದ ಬೇಡ ಎಂದಿದ್ದಳು. ಬೀಳ್ಕೊಟ್ಟು ಬಸ್ಸು ಹತ್ತಿದ್ದೆ.

ಅದೊಂದು ಸುಮಾರಾದ ಊರು. ಮನೆ ಹುಡುಕುವುದು ಕಷ್ಟವಾಗಲಿಲ್ಲ. ದಿವಾಕರನ ಸ್ನೇಹಿತನೆಂದು ಹೇಳಿದ್ದಕ್ಕೆ ಅವರಿಗೆ ಸಂಶಯವಾಗಿರಬೇಕು. ದಿವಾಕರನ ತಂದೆಯವರಿಗೆ